ಅಧ್ಯಕ್ಷರು: ನಿಮ್ಮ ಪ್ರಶ್ನೆಯನ್ನು ಕೇಳಿ.

ಶ್ರಿ ಜಗದೀಶ್ ಕುಮಾರ್ .ಆರ್: ಕೇವಲ ಅಧಿಕಾರಿಗಳನ್ನು ಮಾತ್ರ ಕರೆದುಕೊಂಡು ಹೋದರೆ, ಅವರಿಗೆ ಈ ರಾಜ್ಯಕ್ಕೆ investment ತರಬೇಕೆನ್ನುವ commitment ಇರುವುದಿಲ್ಲ. ಅದಕ್ಕಾಗಿ, ನಮ್ಮ ರಾಜ್ಯಕ್ಕೆ ಒಳ್ಳೆಯದಾಗಬೇಕೆಂದರೆ ಶಾಸಕರನ್ನೂ ಸಹ ಈ ಉಪಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಬೇಕೆನ್ನುವುದು ನನ್ನ ಸಲಹೆ.

ಅಧ್ಯಕ್ಷರು: ಚುನಾಯಿತ ಪ್ರತಿನಿಧಿಗಳನ್ನು ನೇಮಕ ಮಾಡಬೇಕೆನ್ನುವುದು ಅವರ ಸಲಹೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಚುನಾಯಿತ ಪ್ರತಿನಿಧಿಗಳು ಅನೇಕ ಹಂತಗಳಲ್ಲಿ ಸಲಹೆಗಳನ್ನು ಕೊಡಲು ಇರುತ್ತಾರೆ. ಸದನದಲ್ಲಿರುತ್ತಾರೆ, ಬೇರೆ ಬೇರೆ ಕಮಿಟಿಗಳಲ್ಲಿ ಇರುತ್ತಾರೆ. ಸಲಹೆಗಳನ್ನು ಕೊಡಬಹುದು, ಸಲಹೆಗಳನ್ನು ಕೊಡುವುದಕ್ಕೆ ಯಾವುದೇ ತೊಂದರೆಯಿಲ್ಲ. ಅವರ ಎಲ್ಲಾ ಸಲಹೆಗಳನ್ನು ಸ್ವೀಕಾರ ಮಾಡಿ ವಿಶ್ವ ಬಂಡವಾಳ ಹೂಡಿಕೆಯನ್ನು ಬಹಳ ಚೆನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು: ಆಯಿತು.

ಬಳ್ಳಾರಿಯ ಕಾರ್ಖಾನೆಗಳು / ಕಂಪನಿಗಳು

100(1616); ಶ್ರೀ ರವೀಂದ್ರ ಎಂ.ಪಿ. (ಹರಪನಹಳ್ಳಿ)

ಅ) ಬಳ್ಳಾರಿ ಜಿಲ್ಲೆಯಲ್ಲಿ ಸಾಕಷ್ಟು ಕಾರ್ಖಾನೆಗಳಿದ್ದು, ಆ ಪೈಕಿ ದೊಡ್ಡ ಪ್ರಮಾಣದ ಕಂಪನಿಗಳಲ್ಲಿ Corporate Social Responsibility ಅಡಿಯಲ್ಲಿ ಇರುವ ಹಣದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ;

ಆ) ಹಾಗಿದ್ದಲ್ಲಿ, ಆ ಹಣವನ್ನು ಯಾವ ಯಾವ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗಿದೆ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) 31.03.2014ರ ವರೆಗೆ ಸಾಮಾಜಿಕ ಹೊಣೆಗಾರಿಕೆ ಯೋಜನೆ ಅಡಿಯಲ್ಲಿ ಹಣ ಖರ್ಚು ಮಾಡುವುದು ಸ್ವಯಂ ಪ್ರೇರಿತವಾಗಿರುತ್ತದೆ.

ಸರಕಾರದಲ್ಲಿ ಲಭ್ಯವಿರುವ ಮಾಹಿತಿ ಪ್ರಕಾರ ಎರಡು ದೊಡ್ಡ ಕಂಪನಿಗಳು ಬಳ್ಳಾರಿ ಜಿಲ್ಲೆಯಲ್ಲಿ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ಹಣ ಖರ್ಚು ಮಾಡಿರುತ್ತಾರೆ.

01.04.2014 ರಿಂದ ಕೇಂದ್ರ ಸರ್ಕಾರ ಕಂಪನಿ ಅಧಿನಿಯಮ ಪ್ರಕಾರ ಈ ಉದ್ದೇಶಕ್ಕೆ ನಿರ್ದಿಷ್ಟ ಪ್ರಮಾಣದ ಹಣ ಖರ್ಚು ಮಾಡಬೇಕಾಗಿದ್ದು, ಈ ಕಾರ್ಯವನ್ನು Registrar of companies ಅವರು ಮೇಲುಸ್ತುವಾರಿ ಮಾಡುತ್ತಾರೆ. ರಾಜ್ಯ ಸರಕಾರದಿಂದಲೂ ಮಾಹಿತಿ ಪಡೆಯಲು ಕ್ರಮ ಕೈಗೊಳ್ಳಲಾಗುವುದು.

ಆ)

ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆಯಡಿ ಕೆಳಕಂಡ ಪ್ರಮುಖ ಕ್ಷೇತ್ರಗಳಿಗೆ ಹಣವನ್ನು ವಿನಿಯೋಗಿಸಲಾಗಿದೆ.
ಶಿಕ್ಷಣ
ಆರೋಗ್ಯ ತ್ಯಾಜ್ಯ ಸಂಗ್ರಹಣೆ ಮತ್ತು ಸ್ವಾಸ್ಥ್ಯಪಾಲನೆ
ಶೌಚಾಲಯಗಳ ನಿರ್ಮಾಣ
ಮಹಿಳೆಯರ ಸಬಲೀಕರಣ
ಕ್ರೀಡಾಭಿವೃದ್ಧಿ
ದೇಣಿಗೆ
ಅಕ್ಷಯಪಾತ್ರೆ – ಮಧ್ಯಾಹ್ನದ ಊಟದ ಯೋಜನೆ
ಗ್ರಾಮಗಳಲ್ಲಿ ಮೂಲಸೌಲಭ್ಯ ಸುಧಾರಣೆ
ವೃತ್ತಿಪರ ತರಬೇತಿ

ಶ್ರೀ ರವೀಂದ್ರ ಎಂ. ಪಿ.: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಇರುವಂಥ ಕಾರ್ಖಾನೆಗಳಿಂದ ಏನು corporate social responsibility ಮೇಲೆ ಅವರು ಹಣವನ್ನು ಖರ್ಚು ಮಾಡಬೇಕು, ಅದರ ಬಗ್ಗೆ ಅವರು ರಾಜ್ಯ ಸರ್ಕಾರಕ್ಕೆ ಯಾವುದೇ ಮಾಹಿತಿಯನ್ನು ಕೊಡುತ್ತಿಲ್ಲ. ಇಲ್ಲಿ ನೀಡಿರುವ ಉತ್ತರದಲ್ಲಿ Registrar of companies ರವರು ಅದನ್ನು manage ಮಾಡುತ್ತಾರೆ ಎಂದು ಹೇಳಿದ್ದಾರೆ. ಆದರೆ, ಅಲ್ಲಿರುವಂಥ ಜನ ಪ್ರತಿನಿಧಿಗಳನ್ನು ಸಂಬಂಧಪಟ್ಟ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ನಮಗೆ ಮಾಹಿತಿ ಇರುವುದಿಲ್ಲ ಹಾಗೂ ಸರ್ಕಾರಕ್ಕೂ ಮಾಹಿತಿ ಇರುವುದಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಮಾಹಿತಿಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ, ಬಳ್ಳಾರಿ ಜಿಲ್ಲೆಯಲ್ಲಿರುವಂಥ ತಾಲ್ಲೂಕುಗಳಲ್ಲಿ ಆಗಬೇಕಾಗಿರುವಂಥ ಕೆಲಸಗಳೇನಿದೆ, ಅವುಗಳನ್ನು ಮಾಡುವುದಕ್ಕೆ ಒಂದು ಸಮಿತಿಯನ್ನು ರಚನೆ ಮಾಡಿ ಅದರ ಮುಖಾಂತರ ಈ ಹಣವನ್ನು ವಿನಿಯೋಗ ಮಾಡುವುದು ಸೂಕ್ತ ಎನ್ನುವುದು ನನ್ನ ಭಾವನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಈ ಸಾಮಾಜಿಕ ಹೊಣೆಗಾರಿಕೆ ಯೋಜನೆ ಮಾರ್ಚ್ 2014ರವರೆಗೆ ಕಡ್ಡಾಯವಿಲ್ಲ. ಈಗ ದಿನಾಂಕ: 01.04.2014ರಿಂದ ಕಡ್ಡಾಯ ಮಾಡುತ್ತಿದ್ದೇವೆ. ಹಾಗಾಗಿ ಅವರು ಸ್ವಯಂಪ್ರೇರಣೆಯಿಂದ ಈ ಕಂಪನಿಗಳಿಂದ ಕೆಲವು ಕೆಲಸಗಳನ್ನು ಮಾಡುತ್ತಿದ್ದಾರೆ. ಹಾಗಾಗಿ, ಎಷ್ಟು ಕೆಲಸಗಳನ್ನು ಮಾಡಿದ್ದಾರೆ? ಏನು ಮಾಡಿದ್ದಾರೆ? ಏಕೆ ಮಾಡಿಲ್ಲ ಎನ್ನುವ ಲೆಕ್ಕ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಮುಂದಿನ ವರ್ಷದಿಂದ ದಿನಾಂಕ:01.04.2014 ರಿಂದ ಅವರ net asset worth ಇರುವಂಥದ್ದು ₹ 500 ಕೋಟಿಗಳು. ₹ 1,000 ಕೋಟಿ turn over ಆಗಿರುವುದು, ಅದಕ್ಕಿಂತ ಹೆಚ್ಚಾಗಿರುವುದು ಅಥವಾ ₹ 5 ಕೋಟಿಗಿಂತ ಹೆಚ್ಚು ಲಾಭ ಬಂದಿರುತ್ತದೆಯೋ ಅವರು, ಅವರ ಲಾಭದಲ್ಲಿ ಶೇ.2% ಕೊಡಬೇಕು. ಈ ಸಾಮಾಜಿಕ ಹೊಣೆಗಾರಿಕೆ ಯೋಜನೆ ಮಾಡಬೇಕೆಂದು ಇದೆ. ಆಮೇಲೆ ಇದೆಲ್ಲಾ ಲೆಕ್ಕ ಸಿಗುತ್ತದೆ. ಅದನ್ನು

ಪರಿಶೀಲನೆ ಮಾಡುವುದಕ್ಕೆ, ಅವರು ಎಷ್ಟು ಖರ್ಚು ಮಾಡಿದ್ದಾರೆ, ಇದೆಲ್ಲಾ ಹೇಳುವುದಕ್ಕೆ ಸರ್ಕಾರಕ್ಕೂ ಸಹ ಅವಕಾಶವಿದೆ.

ಅಧ್ಯಕ್ಷರು: ಈವರೆಗೆ ಕಡ್ಡಾಯ ಇಲ್ಲ.

ಶ್ರೀ ಸಿದ್ದರಾಮಯ್ಯ: ಈಗ ಕಡ್ಡಾಯ ಇಲ್ಲ.

ಅಧ್ಯಕ್ಷರು: ಪ್ರಿಯಾಂಕ್ ಖರ್ಗೆಯವರು ಈ ವಿಚಾರದ ಬಗ್ಗೆ ಏನೋ ಹೇಳುತ್ತಿದ್ದರು. ಸ್ವಲ್ಪ ಹೇಳಿ.

ಶ್ರೀ ರವೀಂದ್ರ ಎಂ. ಪಿ.: ಈಗ it is a mandatory ಆಗಿದೆ.

ಶ್ರೀ ಸಿದ್ದರಾಮಯ್ಯ: mandatory ಇಲ್ಲ.

ಅಧ್ಯಕ್ಷರು: ಇಲ್ಲವೇ?

ಶ್ರೀ ಪ್ರಿಯಾಂಕ್ ಎಂ. ಖರ್ಗೆ: ಮಾನ್ಯ ಅಧ್ಯಕ್ಷರೆ, ಮೊನ್ನೆ Companies Act 2013ನಲ್ಲಿ ಇದನ್ನು ಕಡ್ಡಾಯ ಮಾಡಿದ್ದಾರೆ.

ಶ್ರೀ ಈ. ತುಕಾರಾಂ: ಮಾನ್ಯ ಅಧ್ಯಕ್ಷರೆ, ಈಗ ಕಡ್ಡಾಯ ಮಾಡಿದ್ದಾರೆ.

ಶ್ರೀ ಪ್ರಿಯಾಂಕ ಎಂ. ಖರ್ಗೆ:– ಮಾನ್ಯ ಅಧ್ಯಕ್ಷರೆ, ಮೊನ್ನೆ ಈ 2%ನ್ನು mandatory ಮಾಡಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ₹ 5 ಕೋಟಿಗಳವರೆಗೆ ಸತತವಾಗಿ 3 ವರ್ಷಗಳಿಂದ ಲಾಭ ಬಂದಿದ್ದರೆ ಮಾಡಬೇಕೆಂದು ಇದೆ.

ಅಧ್ಯಕ್ಷರು: ಸದ್ಯಕ್ಕೆ ಕಡ್ಡಾಯ ಇಲ್ಲ. ಮುಂದೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಪ್ರಿಯಾಂಕ್ ಎಂ. ಖರ್ಗೆ: 2% percent of total profit.

ಅಧ್ಯಕ್ಷರು: ನೀವು ನೀವೇ ಮಾತನಾಡಿದರೆ ಹೇಗೆ? ತುಕಾರಾಂರವರೆ, ನೀವು ದಯವಿಟ್ಟು ಕುಳಿತುಕೊಳ್ಳಿ, ಅವರು ಮಾತನಾಡುತ್ತಿದ್ದಾರೆ, you please

resume. ಪ್ರಿಯಾಂಕ್ ಖರ್ಗೆಯವರೇ, ಅಂದು ನೀವು ಮಾತನಾಡುವಾಗ ಕಾನುನಿನಲ್ಲಿ ಇದೆ ಎಂದು ಹೇಳಿದ್ದೀರಿ. ಅದಕ್ಕೋಸ್ಕರ ಕೇಳುತ್ತಿದ್ದೇನೆ.

ಶ್ರೀ ಪ್ರಿಯಾಂಕ್ ಎಂ. ಖರ್ಗೆ: ಮಾನ್ಯ ಅಧ್ಯಕ್ಷರೆ, ಹೌದು ಈಗ ಕೇಂದ್ರ ಸರ್ಕಾರದವರು 2% mandatory ಮಾಡಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರದಲ್ಲಿ ಯಾವುದೇ ನಿಯಮಗಳನ್ನು ರಚನೆ ಮಾಡಿಲ್ಲ.

ಅಧ್ಯಕ್ಷರು: ಅದನ್ನೆ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಪ್ರಿಯಾಂಕ್ ಎಂ. ಖರ್ಗೆ: ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಏನೆಂದರೆ, cabinet sub-committee ಮಾಡಿ ಸಾಮಾಜಿಕ ಬಂಡವಾಳವನ್ನು ಏನು ಹೂಡುತ್ತಿದ್ದಾರೆ, ಇದನ್ನು ಎಲ್ಲಿ ಮಾಡಬೇಕು, ಯಾವ ರೀತಿ ಮಾಡಬೇಕೆಂಬುದನ್ನು ಸರಿಯಾದ ರೀತಿಯಲ್ಲಿ ನೋಡಬೇಕು. ಏಕೆಂದರೆ, ಇಲ್ಲಿ ಏನು ಮಾಡುತ್ತಿದ್ದಾರೆಂದರೆ, ಬಳ್ಳಾರಿ. . .

ಅಧ್ಯಕ್ಷರು : ಏನು ಮಾಡುತ್ತಿದ್ದಾರೆಂಬುದು ಬೇಡ. Legal ಆಗಿ ಏನಿದೆ ಅಂದು ಹೇಳುತ್ತಿದ್ದಿರಲ್ಲ, ಅದನ್ನು ಹೇಳಿ.

ಶ್ರೀ ಎಂ. ಪಿ. ರವೀಂದ್ರ : ಮಾನ್ಯ ಅಧ್ಯಕ್ಷರೆ, ಬಳ್ಳಾರಿ ಜಿಲ್ಲೆಯಲ್ಲಿರುವ ಕಾರ್ಖಾನೆಗಳು ಈಗ ಛತ್ತೀಸ್‌ಘಡ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿವೆ ಎಂಬ ಮಾಹಿತಿ ಇದೆ.

ಅಧ್ಯಕ್ಷರು : ಆಯಿತು. ಕುಳಿತುಕೊಳ್ಳಿ.

ಶ್ರೀ ಈ. ತುಕಾರಾಂ : ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿ ಬಳ್ಳಾರಿ ಮತ್ತು ಸಂಡೂರಿನಲ್ಲಿ ಬಹಳಷ್ಟು corporate sector ಗಳಿರುವುದರಿಂದ ತಾರತಮ್ಯವಾಗುತ್ತಿದೆ. ಹೇಗಾಗಿದೆ ಎಂದರೆ, . . .

ಅಧ್ಯಕ್ಷರು : ಇಲ್ಲಿರುವ ಪ್ರಶ್ನೆಯನ್ನು ಮೊದಲು ತಿಳಿದುಕೊಳ್ಳಿ. ಪ್ರಶ್ನೆ ಕೇಳಿ. ಇದು ಚರ್ಚೆಯಲ್ಲ.

ಶ್ರೀ ಈ. ತುಕಾರಾಂ : ಮಾನ್ಯ ಅಧ್ಯಕ್ಷರೆ, ಇದು ಒಂದು submission ಅಷ್ಟೆ. ಸಂಬಂಧಪಟ್ಟ area ದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುವುದಿಲ್ಲ. ಬಹಳ ಸಮಸ್ಯೆ ಇದೆ. ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಶ್ರೀ ಎಂ. ಪಿ. ರವೀಂದ್ರ: Basic needs ಗೆ ಅಲ್ಲಿ use ಆಗುತ್ತಿಲ್ಲ. ನಮ್ಮ ಬಳ್ಳಾರಿ ಜಿಲ್ಲೆಯ ಜನ ಪರಿಸರ ಮಾಲಿನ್ಯಕ್ಕೆ ಒಳಗಾಗುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, 2013–14 ರಲ್ಲಿ ಕಂಪನಿ Act ನಲ್ಲಿ ತಿದ್ದುಪಡಿ ಮಾಡಿದ್ದಾರೆ. It will come in to effect from 01–04–2014. ಅವರು ಹೇಳುತ್ತಿರುವುದು ಸರಿಯಾಗಿದೆ. Depending upon the . . . 5 ಕೋಟಿಗಿಂತ ಹೆಚ್ಚು profit ಬರುತ್ತಿದ್ದರೆ, ಅದನ್ನೆಲ್ಲಾ ನಾನು ಹೇಳಿದೆ. 2014–15 ರಲ್ಲಿ ಏನೆಲ್ಲಾ ಮಾಡಿದ್ದಾರೆ, 2% ಉಪಯೋಗಿಸಿದ್ದಾರೋ, ಇಲ್ಲವೋ, ಲಾಭದಲ್ಲಿದೆಯೋ, ಇಲ್ಲವೋ ಎಂಬ ವಿವರಣೆಯನ್ನು 2015–16 ರಲ್ಲಿ ಪಡೆದುಕೊಂಡು, ಅವರು ಮಾಡಿರದಿದ್ದರೆ ಅವರ ಮೇಲೆ ಏನು ಕಾನೂನು ಕ್ರಮ ತೆಗೆದುಕೊಳ್ಳಬೇಕೋ, ತೆಗೆದುಕೊಳ್ಳುತ್ತೇವೆ. ಇಲ್ಲಿಯವರೆಗೆ ಸ್ವಯಂ ಪ್ರೇರಣೆಯಿಂದ ಮಾಡಿದ್ದಾರೆ. ಜಿಂದಾಲ್ ರವರು ಮಾಡಿದ್ದೇವೆಂದು. . .

ಅಧ್ಯಕ್ಷರು : ಅದು ಬೇಡ. ಅವರು ಇಷ್ಟ ಬಂದ ಹಾಗೆ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ಇಷ್ಟ ಬಂದ ಹಾಗೆ ಮಾಡಿದ್ದಾರೆ. ಇದು ಪರಿಸ್ಥಿತಿ.

ಅಧ್ಯಕ್ಷರು : Next ಕಾನೂನುಬದ್ಧವಾಗಿ ಆಗುತ್ತದೆ.

ಶ್ರೀ ಸಿದ್ದರಾಮಯ್ಯ : 01.04.2014 ರಿಂದ ಅವರು ಕಡ್ಡಾಯವಾಗಿ ಮಾಡಬೇಕಾಗುತ್ತದೆ ಜೊತೆಗೆ ಲೆಕ್ಕ ವಿವರಣೆಯನ್ನು ಸಹ ಕೊಡಬೇಕಾಗುತ್ತದೆ.

ಅಧ್ಯಕ್ಷರು : ಕಾನೂನಿನಲ್ಲಿ ಏನಿದೆ, ಅದನ್ನು ಮಾಡುತ್ತಾರೆ. ಈಗ ಪ್ರತಾಪಗೌಡ ಪಾಟೀಲ್ ರವರ ಪ್ರಶ್ನೆ.